Govt. of Karnataka  ಅನುಬಂಧ-ಎ  [C.R.P. 67

Deposition Sheets
(R.P. No. 57)
Form No. 4
(Criminal)

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ,ಶಿರಾ.**

**ಪ್ರಕರಣ ಸಂಖ್ಯೆ ಸಿ.ಸಿಃ 22/2018**

| ದಿನಾಂಕ 06.11.2023 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | | |
|---|---|---|---|
| C.W. | 7 | P.W. | 5 |
| ಹೆಸರು | ರಾಜಣ್ಣ | | |
| ತಂದೆಯ/ಗಂಡನ ಹೆಸರು | ನಾಗಣ್ಣ | | |
| ವಯಸ್ಸು | 45 | | |
| ಉದ್ಯೋಗ | ವ್ಯವಸಾಯ | | |
| ವಾಸ | ಎಮ್ಮೇರಹಳ್ಳಿ ಗ್ರಾಮ | | |

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದಃ**

1. ಚಾ.ಸಾ.1 ಮತ್ತು 2 ರವರು ನಮ್ಮ ಸಂಬಂಧಿಕರು. ಆರೋಪಿತರ ಪರಿಚಯ ಇದೆ. ಸುಮಾರು 5 ವರ್ಷಗಳ ಹಿಂದೆ ಬೆಳಗ್ಗೆ 11.00 ಗಂಟೆ ಸಮಯದಲ್ಲಿ ನಾನು ನಮ್ಮ ಮನೆಯ ಮುಂದೆ ಇದ್ದಾಗ ಟ್ರಾಕ್ಟರ್ ಚಲಾಯಿಸಿದ ವಿಚಾರಕ್ಕೆ ಸಂಬಧಿಸಿದಂತೆ 1 ನೇ ಆರೋಪಿಯು ಚಾ.ಸಾ. 2 ರವರು ಕೋಲಿನಿಂದ ಮೈಕೈಗೆ ಹೊಡೆಯುತ್ತಿದ್ದು, ಆಗ ನಾನು ಗಲಾಟೆಯನ್ನು ಬಿಡಿಸಿರುತ್ತೇನೆ. ಬೇರೇನೂ ತೊಂದರೆ ಮಾಡಿರುವ ಘಟನೆಯನ್ನು ನಾನು ನೋಡಿರುವುದಿಲ್ಲ. ಪೊಲೀಸರಿಗೆ ನಾನು ಈ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಿ.ಪಿ.2 ರಲ್ಲಿ ಸಾಕ್ಷಿ ತನ್ನ ಸಹಿ ಗುರುತಿಸಿದ ಕಾರಣ ಸದರಿ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಆರೋಪಿಗಳು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಗುರುತಿಸುವಲ್ಲಿ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿದಾರರು ಅಭಿಯೋಜನೆಯ ಪ್ರಕರಣಕ್ಕೆ ಸಹಕರಿಸಿದ ಕಾರಣ ಮಾನ್ಯ ಸ.ಸ.ಆ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ **ಪ್ರತಿಕೂಲ ಸಾಕ್ಷಿ** ಎಂದು ಪರಿಗಣಿಸಿ ಪಾಟೀಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃ- ಎ.ಪಿ.ಪಿ. ರವರಿಂದಃ**

1. 29.06.2017 ರಂದು ಮಧ್ಯರಾತ್ರಿ 1.00 ಗಂಟೆ ಸಮಯದಲ್ಲಿ ನಮ್ಮ ಮನೆಯ ಬಳಿ ನಾನು ಇದ್ದಂತಹ ಸಮಯದಲ್ಲಿ ನಮ್ಮ ಗ್ರಾಮದ ಈರಣ್ಣನವರು ಕಟ್ಟುತ್ತಿದ್ದ ಮನೆಗೆ ಮರಳನ್ನು

ಟ್ರಾಕ್ಟರ್ ನಲ್ಲಿ ಹೊಡೆಸುವಾಗ ನೀರಿನ ಪೈಪು ಹೊಡೆದು ಹೋಗಿದ್ದು, ಆದ ಕಾರಣ ನೀರು ಬರುತ್ತಿರಲಿಲ್ಲ, ಅದನ್ನು ಚಾ.ಸಾ.2 ರವರು ಕೇಳಿದ್ದಕ್ಕೆ ಆರೋಪಿತರು ಏಕಾಏಕಿ ಜಗಳ ತೆಗೆದಿದ್ದು, ಚಾ,ಸಾ.2 ರವರ ಸ್ಥಳಕ್ಕೆ ಅತಿಕ್ರಮ ಪ್ರವೇಶ ಮಾಡಿ ನಮಗೆ ಇಷ್ಟ ಬಂದಂತೆ ಟ್ರಾಕ್ಟರ್ ನ್ನು ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿ, ಕೆಟ್ಟ ಪದಗಳಿಂದ ನಿಂಧಿಸಿ ಚಾ.ಸಾ.2 ರವರ ತಲೆಯ ಕೂದಲನ್ನು 2 ಮತ್ತು 3 ನೇ ಆರೋಪಿತರು ಹಿಡಿದು ಎಳೆದಾಡಿ ಮೈಕೈಗಳಿಗೆ ಹೊಡೆದಿರುತ್ತಾರೆ ಎಂದರೆ ಸರಿ. ಗಲಾಟೆ ಬಿಡಿಸಲು ಬಂದ ಚಾ.ಸಾ.1 ರವರಿಗೆ 1 ರಿಂದ 3 ನೇ ಆರೋಪಿತರು ತಲೆ ಕೂದಲನ್ನು ಹಿಡಿದು ಎಳೆದಾಡಿ ಮೈಕೈಗೆ ಹೊಡೆದಿರುತ್ತಾರೆ ಎಂದರೆ ಸರಿ.

2. 1 ನೇ ಆರೋಪಿಯು ಚಾ.ಸಾ.1 ರವರ ಎಡಕೈಗೆ ಹಲ್ಲಿನಿಂದ ಕಚ್ಚಿ ಗಾಯಪಡಿಸಿರುತ್ತಾರೆ ಎಂದರೆ ಸರಿ. ಆರೋಪಿಗಳು ಸೈಜುಗಲ್ಲನ್ನು ಎತ್ತುಕೊಂಡು ಬಂದು ನಮ್ಮ ತಂಟೆಗೆ ಬಂದರೆ ನಿನ್ನ ತಲೆಯ ಮೇಲೆ ಎತ್ತಿ ಹಾಕಿ ಕೊಲೆ ಮಾಡುತ್ತೇನೆ ಎಂದು ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ. 4 ನೇ ಆರೋಪಿಯು ಚಾ.ಸಾ.3 ರವರ ಸೀರೆಯನ್ನು ಹಿಡಿದು ಎಳೆದಾಡಿ ಮೈಕೈಗೆ ಕೈಗಳಿಂದ ಹೊಡೆದು ಅವಮಾನ ಮಾಡಿರುತ್ತಾರೆ ಎಂದರೆ ಸರಿ. ನಾನು ಮತ್ತು ಚಾ.ಸಾ. 7 ರವರು ಗಲಾಟೆಯನ್ನು ಬಿಡಿಸಿರುತ್ತೇವೆ ಎಂದರೆ ಸರಿ. ಈ ಬಗ್ಗೆ ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿ.

3. ದಿನಾಂಕ 05.07.2017 ರಂದು ಉಮೇಶ ರವರ ಖಾಲಿ ನಿವೇಶನದ ಬಳಿ ಪೊಲೀಸರು ಚಾ.ಸಾ. 1 ರವರು ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ನಿ.ಪಿ. 2 ರಂತೆ ಮಹಜರನ್ನು ಮಾಡಿ ಅದನ್ನು ನನಗೆ ಓದಿ ತಿಳಿಸಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ-</u>** ಆರೋಪಿ ಪರ ಶ್ರೀ ಬಿ.ಆರ್. ವಕೀಲರು ಸಮಯಾವಕಾಶ ಕೋರಿದ್ದು, ನಿರಾಕರಿಸಲಾಗಿದೆ.

(ಉಕ್ತಲೇಖನವನ್ನು ತರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು) **ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**